International Journal of Applied Research 2019; 5(1): 183-187



International Journal of Applied Research

**ISSN Print:** 2394-7500
**ISSN Online:** 2394-5869
**Impact Factor:** 5.2
IJAR 2019; 5(1): 183-187
www.allresearchjournal.com
Received: 26-11-2018
Accepted: 28-12-2018

**ಡಾ.ಎಂ.ಎಸ್.ದುರ್ಗಾಪ್ರವೀಣ**
Assistant Professor, Department of Kannada Language and Translation Studies, Dravidian University, SrinivasaVanam, Kuppam, Chittor Dist, Andhra Pradesh, India

**Correspondence**
**ಡಾ.ಎಂ.ಎಸ್.ದುರ್ಗಾಪ್ರವೀಣ**
Assistant Professor, Department of Kannada Language and Translation Studies, Dravidian University, SrinivasaVanam, Kuppam, Chittor Dist, Andhra Pradesh, India

# ಇಪ್ಪತ್ತನೇ ಶತಮಾನದ ಸ್ಥಿತ್ಯಂತರಗಳ ಹಿನ್ನೆಲೆಯಲ್ಲಿ ತತ್ವಪದಗಳ ಸ್ವರೂಪ

**ಡಾ.ಎಂ.ಎಸ್.ದುರ್ಗಾಪ್ರವೀಣ**

ಪ್ರಸ್ತುತ ಪ್ರಬಂಧವು ತತ್ವಪದಗಳೆಂಬ ವಿಶಿಷ್ಟ ಭಾಷಿಕ ರಚನೆಗಳು ನಿರ್ದಿಷ್ಟ ಕಾಲಘಟ್ಟವೊಂದರಲ್ಲಿ ಪಡೆದುಕೊಂಡ ಸ್ವರೂಪವನ್ನು ಅರ್ಥೈಸಿಕೊಳ್ಳುವ ಪ್ರಯತ್ನವಾಗಿದೆ. ತನ್ಮೂಲಕ ಇಂದು ತತ್ವಪದಗಳನ್ನು ಅಧ್ಯಯನ ನಡೆಸಲು ಅಗತ್ಯವಾಗಿರುವ ಭೂಮಿಕೆಯನ್ನು ಕಂಡುಕೊಳ್ಳುವ ಉದ್ದೇಶವು ಇಲ್ಲಿದೆ. ಇದಕ್ಕಾಗಿ ಇಲ್ಲಿ ಮುದ್ರಣ, ಧ್ವನಿಮುದ್ರಣ ಮತ್ತು ಶ್ರವ್ಯಮಾಧ್ಯಮ–ಆಕಾಶವಾಣಿ ಈ ಮೂರು ನೆಲೆಗಳನ್ನು ಗಮನದಲ್ಲಿರಿಸಿಕೊಳ್ಳಲಾಗಿದೆ. ತತ್ವಪದಗಳು ಮೌಖಿಕ ಪರಂಪರೆಯಿಂದ ದಾಖಲೀಕರಣದೆಡೆಗೆ ಸಾಗಿದ್ದು ಇಪ್ಪತ್ತನೇ ಶತಮಾನದಲ್ಲಿ ಕಾಣಿಸುವ ಮುಖ್ಯ ಅಂಶ. ಹೀಗೆ ತತ್ವಪದಗಳು ಲಿಖಿತರೂಪದಲ್ಲೂ ಕಾಣಿಸಿಕೊಳ್ಳುವ, ಧ್ವನಿಮುದ್ರಿತ ರೂಪ ಪಡೆದುಕೊಳ್ಳುವ ಅಂತೆಯೇ ಶ್ರವ್ಯ ಮಾಧ್ಯಮವೊಂದರ ಮೂಲಕ ಸಮೂಹವನ್ನು ತಲುಪುವ ಸಂದರ್ಭ, ಸ್ವರೂಪವನ್ನು ದಾಖಲಿಸುವುದು ಪ್ರಬಂಧದ ಮುಖ್ಯ ಉದ್ದೇಶವಾಗಿದೆ.[1]

ತತ್ವಪದಗಳು ಎಂದಾಗ ಸಾಮಾನ್ಯವಾಗಿ ನೆನಪಿಗೆ ಬರುವ 18ರಿಂದ20ನೇ ಶತಮಾನದವರೆಗಿನ ಮೌಖಿಕ ಪರಂಪರೆಯ ರಚನೆಗಳನ್ನು ಇಲ್ಲಿ ಗಮನದಲ್ಲಿರಿಸಿಕೊಂಡು ಮುಂದುವರೆಯಲಾಗಿದೆ. ತತ್ವಪದಕಾರರು ಎಂದಾಕ್ಷಣ ನೆನಪಾಗುವ ಹೆಸರುಗಳು ಹಲವು. ಕನ್ನಡ ವಿಷಯ ವಿಶ್ವಕೋಶದಲ್ಲಿ ಗುರುತಿಸಿರುವಂತೆ ಕಡಕೋಳ ಮಡಿವಾಳಪ್ಪ, ತಳೆವಾಡಿ ನಬಿ, ಶಿಶುನಾಳ ಶರೀಫ, ಹಸನ ಸಾಹೇಬ, ಹಲಸಂಗಿ ಖಾಜಾ ಸಾಹೇಬ, ಗೋಕಾವಿ ಸಾತು ಶಾಮಣ್ಣ, ಹಲಸಂಗಿ, ಪರಮಾನಂದವಾಡಿ, ಬೀಳೂರ ಕವಿ, ಇದರೊಂದಿಗೆ ಸದಾನಂದಯೋಗಿ (ನಿತ್ಯಾತ್ಮ) ಬಳ್ಳಾರಿ, ಭಟಕಳ ಅಪ್ಪಯ್ಯ (ವಿನಯಾನಂದ) ಮೊದಲಾದವರು.[2]

1996–1998ರ ಅವಧಿಯಲ್ಲಿ ಕರ್ನಾಟಕ ಸಾಹಿತ್ಯ ಅಕಾಡಮಿಯ ‘ಮುತ್ತಿನಹಾರ’ ಮಾಲಿಕೆಯ ಮುನ್ನುಡಿಯಲ್ಲಿ ಅಂದಿನ ಅಧ್ಯಕ್ಷರಾಗಿದ್ದ ಶಾಂತರಸ ಅವರು ಹೀಗೆ ಹೇಳುತ್ತಾರೆ, “ಈವರೆಗೂ ಉಪೇಕ್ಷೆಗೆ ಒಳಗಾಗಿದ್ದ ತತ್ವಪದಕಾರರು ದೊಡ್ಡ ಪ್ರಮಾಣದಲ್ಲಿ ಬೆಳಕಿಗೆ ಬಂದುದು ಈ ಮಾಲಿಕೆಯ ವೈಶಿಷ್ಟ್ಯವಾಗಿದೆ. ರಾಮಪುರ ಬಕ್ಕಪ್ಪ, ಮೋಟ್ನಳ್ಳಿ ಹಸನಸಾಹೇಬ, ಕೊಳ್ಳೂರ ಹುಸನಾಸಾಹೇಬ, ಮಹಗಾಂವ ಮೀರಾಸಾಬ, ದ್ಯಾಗಾಯಿ ಗುಂಡಪ್ಪ ಮುಂತಾದವರ ತತ್ವಪದಗಳು ಮೊಟ್ಟ ಮೊದಲು ಪ್ರಕಟಗೊಂಡಿರುವುದು ಈ ಮಾಲಿಕೆಯಲ್ಲಿಯೇ. 17–18ನೇ ಶತಮಾನದಲ್ಲಿ ಕನ್ನಡ ಸೃಜನಶೀಲತೆ ಬತ್ತಿ ಮೌನವಾಗಿರದೆ ಶಕ್ತಿಯುತ ಧ್ವನಿಯಲ್ಲಿ ತನ್ನ ಪ್ರತಿಭೆಯನ್ನು ಪ್ರಕಟಿಸಿದೆ ಎನ್ನುವುದನ್ನು ಈ ತತ್ವಪದಕಾರರು ತೋರಿಸಿಕೊಟ್ಟಿರುವುದನ್ನು ಈ ಮಾಲಿಕೆ ದಾಖಲಿಸಿದೆ.” (ಮಹಾದೇವಪ್ಪ ಬಿ; 1996;ಪು.6)

ಈ ಮಾತುಗಳನ್ನು ಗಮನಿಸಿದಾಗ ಶತಮಾನದ ಕೊನೆಯ ದಶಕದ ವೇಳೆಗೆ ಬಂದ ಈ ಮುದ್ರಿತ ಪಠ್ಯಗಳು, ಇಲ್ಲಿನ ದಾಖಲೀಕರಣ, ಪ್ರಕಟಣೆ, ಸಂಗ್ರಹ, ಪ್ರಸಾರದಲ್ಲಿರುವ ಆಶಯ ಸ್ಪಷ್ಟವಾಗುತ್ತದೆ. ಇಂತಹ ಯೋಜನೆಯೊಂದು ಅವಶ್ಯವಾಗಿದ್ದು ಇದರಿಂದಾಗಿ ಮುಂದಿನ ಅಧ್ಯಯನಕಾರರಿಗೆ, ಆಸಕ್ತರಿಗೆ ಹಲವು ಮಾಹಿತಿಗಳು ಒಂದೆಡೆಗೆ ದೊರೆಯುವಂತಾಯಿತು. ಈ ಮಾಲಿಕೆಯಲ್ಲಿ 19–20ನೇ ಶತಮಾನದ ತತ್ವಪದಕಾರರೂ, ಅವರ ತತ್ವಪದಗಳೂ ಪರಿಚಯಗೊಂಡಿವೆ.

ತತ್ವಪದಗಳು ಮೌಖಿಕದಿಂದ ಲಿಖಿತರೂಪದತ್ತ ಬಂದಿರುವ ಪ್ರಕ್ರಿಯೆ, ಅದರ ಸ್ವರೂಪವನ್ನು ಈ ಹಿನ್ನೆಲೆಯಲ್ಲಿ ಗಮನಿಸಬೇಕು. ಸಮಾಜದ ಹಲವು ಅಕ್ಷರಬಲ್ಲ ಸಮುದಾಯಗಳಿಗೆ ಹೀಗೆ ಮುದ್ರಿತರೂಪದ ಮೂಲಕವೂ ತತ್ವಪದಗಳು ತಲುಪುವಂತಾಯಿತು. ವಾಗ್ವಿಲಾಸ ಹುಬ್ಬಳ್ಳಿಯವರು

ನಲಂದಪುರ (ನರಗುಂದ) ತತ್ವದ ಪದಗಳು, ಧಾರವಾಡ ತತ್ವದ ಪದಗಳು, ಬಳ್ಳಾರಿ ಶೆಟ್ಟರು ಕೊಡೆಕಲ್ಲು ತತ್ವದ ಪದಗಳು, ಮುಚಕಂಡಿ ತತ್ವದ ಪದಗಳನ್ನು ಪ್ರಕಟಿಸಿದ ಉಲ್ಲೇಖ ದೊರೆಯುತ್ತದೆ. (ಅಮರೇಶ ನುಗಡೋಣಿ; 2014; ಪು.111–124) ಈ ತೆರನಾದ ಇನ್ನೂ ಹಲವು ಹೊತ್ತಿಗೆ, ಕಿರುಹೊತ್ತಿಗೆಗಳು ಪ್ರಕಟವಾಗಿರುವ ಸಾಧ್ಯತೆಯಿದೆ. ಅವುಗಳ ಪ್ರತ್ಯೇಕ ಅಧ್ಯಯನ ನಡೆಯಬೇಕಿದೆ.

ಅಧ್ಯಯನಕಾರರು ಪುಸ್ತಕರೂಪದಲ್ಲಿ ಪ್ರಕಟಿಸಿದ ತತ್ವಪದಗಳನ್ನು ಗಮನಿಸಿದಾಗ ವಿವಿಧ ಮಾದರಿಗಳು ಕಂಡುಬರುತ್ತವೆ.

1. ಕ್ಷೇತ್ರಕಾರ್ಯ ಸಂಗ್ರಹದ ಮೂಲಕ ಹಾಡುಗಾರರು ಹಾಡಿದ್ದನ್ನು ಧ್ವನಿಮುದ್ರಣ ಮಾಡಿ ಬರಹರೂಪಕ್ಕೆ ತಂದಿರುವುದು ಒಂದು ಮಾದರಿ. ಇದಕ್ಕೆ ಉದಾಹರಣೆಯಾಗಿ 'ಸಾವಳಗಿ ಮಹಮ್ಮದ ಸಾಬ' ಕೃತಿಯನ್ನು ಕಾಣಬಹುದು.
2. ತತ್ವಪದಕಾರರು ಹಾಡಿದ್ದನ್ನು ಹಾಗೆಯೇ ಧ್ವನಿಮುದ್ರಣವಿಲ್ಲದೆ ಬರಹರೂಪಕ್ಕೆ ತಂದಿರುವುದು ಇನ್ನೊಂದು ಮಾದರಿ. ಇದಕ್ಕುದಾಹರಣೆಯಾಗಿ 'ರಾಮಪುರ ಬಕ್ಕಪ್ಪ' ಪುಸ್ತಕವನ್ನು ಗಮನಿಸಬಹುದು.
3. ಕೆಲವು ವರ್ಷಗಳ ಹಿಂದೆ ಬರೆದಿಟ್ಟದ್ದನ್ನು ಬರವಣಿಗೆಯ ಹಸ್ತಪ್ರತಿಯಿಚಿದ ಮುದ್ರಿತರೂಪಕ್ಕೆ ತಂದಿರುವುದೂ ಇದೆ. ಇದಕ್ಕುದಾಹರಣೆಯಾಗಿ 'ಮೋಟ್ನಳ್ಳಿ ಹಸನಸಾಹೇಬ' ಕೃತಿಯನ್ನು ಹೆಸರಿಸಬಹುದು.

ಈ ಪ್ರಕ್ರಿಯೆಯಲ್ಲಾದ ಪ್ರಮುಖ ಬದಲಾವಣೆ ಎಚಿದರೆ ತತ್ವಪದಗಳಿಗೆ ಶೀರ್ಷಿಕೆ ನೀಡಿರುವುದು. ಈ ಶೀರ್ಷಿಕೆಗಳು ಮುಕ್ತವಾಗಿರುವ ತತ್ವಪದಗಳನ್ನು ಒಂದು ನಿರ್ದಿಷ್ಟ ಅರ್ಥಚ್ಛಾಯೆಯ ಮೂಲಕ ಗುರುತಿಸಿಕೊಂಡು ಸಮಕಾಲೀನ ಓದುಗರಿಗೆ ನೀಡುವ ಕಾರ್ಯವನ್ನು ಮಾಡುತ್ತವೆ. ಈ ಶೀರ್ಷಿಕೆಗಳ ಸ್ವರೂಪವನ್ನು ಇಲ್ಲಿ ಗುರುತಿಸಬಹುದು:

ಅ. ತತ್ವಪದದೊಳಗಿನ ಅರ್ಥವತ್ತಾದ ಒಂದು ಪದ. ಉದಾಹರಣೆಗೆ *ಮೂಗುತಿ, ಭ್ರಷ್ಟರು, ನೆಲಮನಿ, ಠಿಕಾಣಿ.*

ಆ. ತತ್ವಪದದಲ್ಲಿ ಕಂಡುಬರುವ ಒಂದು ನಿರ್ದಿಷ್ಟ ಸಾಲು. ಉದಾಹರಣೆಗೆ *ಅಳಿದೋಯ್ತು ಮನಿಮಠ.*

ಇ. ತತ್ವಪದದ ಭಾವಾರ್ಥ ಸೂಚಿಸುವ ಪದ. ಉದಾಹರಣೆಗೆ *ಅರವು ಬರಲಿಲ್ಲ.*

ಹೀಗೆ ಅನೇಕ ಸಂಕಲನಗಳಲ್ಲಿ ಬಂದಿರುವುದನ್ನು ಕಾಣಬಹುದು.

ತತ್ವಪದಗಳ ಕುರಿತಾದ ಪರಿಚಯಾತ್ಮಕ ಅಥವಾ ಅಧ್ಯಯನ ಕೃತಿಗಳಲ್ಲಿ ಅವುಗಳನ್ನು ನಿರ್ದಿಷ್ಟ ಪರಿಕಲ್ಪನೆಗಳಡಿಯಲ್ಲಿ ವರ್ಗೀಕರಿಸಿಕೊಂಡು ನೀಡಲಾಗಿರುವುದು ಕಂಡುಬರುತ್ತದೆ. ಉದಾಹರಣೆಗೆ ಮೀನಾಕ್ಷಿ ಬಾಳಿಯವರು ಖೈನೂರ ಕೃಷ್ಣಪ್ಪನವರ ಲಭ್ಯವಿರುವ ಒಟ್ಟು ತತ್ವಪದಗಳನ್ನು ಹೀಗೆ ವರ್ಗೀಕರಿಸಿ ನೀಡಿದ್ದಾರೆ:

ಗುರುಸ್ತುತಿ–6
ಗಂಗಾಸ್ತುತಿ–1
ಸಾಮಾಜಿಕ ವಿಡಂಬನೆ–5
ಲೋಕನೀತಿ–9
ತತ್ವಸಿದ್ಧಾಂತ–19
ಬೆಡಗು–6
ಸಾಂದರ್ಭಿಕ–7
ಮಂಗಳಾರತಿ ಪದಗಳು–3

ತತ್ವಪದಗಳ ಸಂಕಲನಗಳಿಗೆ ಶೀರ್ಷಿಕೆಗಳನ್ನು ನೀಡುವಾಗ ತತ್ವಪದಕಾರರ ಹೆಸರು ಅಥವಾ ಸ್ಥಳನಾಮಗಳನ್ನು ಬಳಸಿರುವುದನ್ನು ಕಾಣಬಹುದು. ಹೀಗೆ ಇಲ್ಲಿ ಆಧುನಿಕ ಪಠ್ಯಗಳು ಮತ್ತು ಅವುಗಳ ಅಧ್ಯಯನ ಕ್ರಮದ ನೆಲೆಯಲ್ಲಿ ತತ್ವಪದಗಳನ್ನು ಗ್ರಹಿಸಿರುವುದು ಗೋಚರವಾಗುತ್ತದೆ. ಮೀನಾಕ್ಷಿ ಬಾಳಿಯವರು ಕಡಕೋಳು ಮಡಿವಾಳಪ್ಪ ಪರಂಪರೆ ಬಗ್ಗೆ ಬರೆಯುತ್ತಾ "ಇವರ ಪದಗಳಲ್ಲಿ ಜೀವಂತಿಕೆ ಇದೆ. ಅಂದಿನ ಚಾರಿತ್ರಿಕ ಸಂಘರ್ಷ ಆಂತರಿಕ ಹೋರಾಟ, ಖಾಸಗಿ ಅನುಭವ, ಯೌಗಿಕಾನಂದದ ಪೂರ್ಣತೆಗಳು ಇಲ್ಲಿ ಸಾಕಾರಗೊಂಡಿವೆ. ಇವರೆಲ್ಲರ ತತ್ವಪದಗಳನ್ನು ಆಯಾ ಹಿನ್ನೆಲೆಯೊಂದಿಗೆ ಕ್ರಮಬದ್ಧವಾಗಿ ಸೇರಿಸಿ ಬರೆದರೆ ಇನ್ನೊಂದು ಶೂನ್ಯಸಂಪಾದನೆಯಾಗುವ ಸಾಧ್ಯತೆಯನ್ನು ತಳ್ಳಿಹಾಕುವಂತಿಲ್ಲ" (ಮೀನಾಕ್ಷಿ ಬಾಳಿ; 1998; ಪು.63) ಎನ್ನುತ್ತಾರೆ.

ಈ ಪಠ್ಯಗಳು ಅಂತಹಾ ಪ್ರಯತ್ನಗಳಿಗೂ ಒಗ್ಗುವಂತವು ಎನ್ನುವುದು ನಿಜವಾದರೂ ಅದು ಅನಿವಾರ್ಯವೇನಲ್ಲ ಎಂಬುದನ್ನು ಇಲ್ಲಿ ಗುರುತಿಸಬೇಕು. ತತ್ವಪದಗಳಲ್ಲಿ ಅಂತರ್‌ಪಠ್ಯ ಗುಣ (ಽಟಿಣಜಡಿಣಜಥಣಣಚಿಟುಣಥಿ)ವಿದೆ. ಉದಾಹರಣೆಗೆ ಗುರುವಿನ ಬಗೆಗೆ ಖೈನೂರ ಕೃಷ್ಣಪ್ಪನವರ 'ಗೌಪ್ಯದ ಮಾರ್ಗದ ತಿಳದಿಲ್ಲ...' ಮತ್ತು ಶಿಶುನಾಳ ಶರೀಫರ 'ಗುರುವಿನ ಗುಲಾಮನಾಗುವ ತನಕ ...' ಪದಗಳಲ್ಲಿ ಸಾಮ್ಯತೆ ಇರುವುದನ್ನು ವಿಶೇಷವಾಗಿ ಗಮನಿಸಬಹುದು. ಆದರೆ ಹತ್ತೊಂಬತ್ತನೇ ಶತಮಾನದ ಗ್ರಹಿಕೆ ಇದಾಗಿರಲಿಲ್ಲ. ಶಂಕರಾನಂದಯೋಗಿ (1833–1913) ತತ್ವಪದಗಳನ್ನು ಸಂಕಲಿಸಿದ ಎಸ್. ನಟರಾಜ ಬೂದಾಳು ಅವರು 'ಗುರುವಿನ ಕ್ಷಮೆ ಕೇಳುತ್ತಾ ...' ಎಂದು ಮೊದಲಮಾತಿನಲ್ಲಿ "ತತ್ವಪದಗಳನ್ನು ದಾಖಲಾತಿಗೊಳಿಸಿ (ಜಂಥಿಣಟಜಟಿಣಚಿಣುಂಟಿ) ಆಸ್ವಾದಿಸುವುದಲ್ಲ. ಇಂತಹ ದಾಖಲಾತಿಗೊಳಿಸುವಿಕೆಗೆ, ಆಸ್ವಾದಿಸುವಿಕೆಗೆ ಇಲ್ಲಿ ಸ್ಪಷ್ಟವಾದ ನಿಷೇಧವಿದೆ. ಈ ಪುಸ್ತಕ ಮತ್ತು ಇಂತಹ ಅನೇಕ ಪುಸ್ತಕಗಳ ಪ್ರಕಟಣೆ ಈ ನಿಷೇಧದ ಉಲ್ಲಂಘನೆಯಾಗಿದೆ. ಸದ್ಗುರುವು ನಮ್ಮನ್ನು ಕ್ಷಮಿಸಲಿ."(ನಟರಾಜ ಬೂದಾಳು; 1998; ಪು.9) ಎನ್ನುತ್ತಾರೆ.

ಆದರೆ ಈ ತೆರನಾದ ಪ್ರಯತ್ನಗಳು ಇಪ್ಪತ್ತನೇ ಶತಮಾನದ ಸ್ಥಿತ್ಯಂತರಗಳ ಸಂದರ್ಭದಲ್ಲಿ ಹಲವು ಅನನ್ಯತೆಗಳ ಹುಡುಕಾಟದಲ್ಲಿ ಮೂಡಿಬಂದ ಉತ್ತರಗಳು, ಸಾಧ್ಯತೆಗಳು. ಉತ್ತರ ಕರ್ನಾಟಕದಲ್ಲಿ ತತ್ವಪದಕಾರರು ಅತೀ ಹೆಚ್ಚು ಎನ್ನುವುದು ಸ್ಪಷ್ಟ. ಅದೇ ವೇಳೆ ಇತರೆಡೆಗಳಲ್ಲೂ– ಸೀಮಿತ ಸಂಖ್ಯೆಯಲ್ಲಾದರೂ– ಇರುವ ಇಂತಹಾ ತತ್ವಪದಕಾರರ ವಿವರವಾದ ಅಧ್ಯಯನಗಳು ನಡೆಯಬೇಕಿವೆ. ಉದಾಹರಣೆಗೆ ಭಟಕಳ ಅಪ್ಪಯ್ಯ (ವಿನಯಾನಂದ)ರ ತತ್ವದ ಪದಗಳು, ತುಮಕೂರು ಪ್ರಾಂತ್ಯದಲ್ಲಿ ಗುರು ಶಂಕರಾನಂದ ಯೋಗಿ ತತ್ವಪದಗಳು ಅರಿವು ಪರಂಪರೆಯೊಂದರ ವಿಶಿಷ್ಟತೆಯ ತೌಲನಿಕ ಅಧ್ಯಯನಕ್ಕೆ ಸಹಕಾರಿಯಾಗಬಲ್ಲುದು.

ಈಗ ತತ್ವಪದಗಳು ಪ್ರಚುರಗೊಂಡಿರುವುದು ಹೇಗೆ ಎಂಬ ಪ್ರಶ್ನೆಗೆ 'ವೃತ್ತಿಗಾಯಕರು, ಭಜನಾಮಂಡಳಿಯವರು ಹಾಡುತ್ತಾ ಬಂದಿರುವುದರಿಂದ, ದಂಡಿಗೆದಾಸರು ಕಟ್ಟಿಗೆ ತಂಬೂರಿಯೊಂದಿಗೆ, ಹೊಲಿದಾಸರು ಏಕತಾರಿಯೊಂದಿಗೆ ಹಾಡುವುದರಿಂದ, ಕರ್ನಾಟಕದಲ್ಲಿ ಗೊಂದಲಿಗರು ಎಂಬ ವೃತ್ತಿಗಾಯಕರು ಕಥೆಗಳಲ್ಲಿ, ಉಪಕಥೆಗಳಲ್ಲಿ ಹೆಣೆದು ಸಾಕಷ್ಟು ಪ್ರಚಾರ ಮಾಡಿರುವುದರಿಂದ, ಜೊತೆಗೆ ಕಂಬಿಯವರು, ಸಾರುವ ಅಯ್ಯಂದಿರು, ಕರಪಾಲದವರು, ಬಹುರೂಪಿಯವರು ಹಾಡುತ್ತಿರುವುದರಿಂದ' (ಅರವಿಂದ

ಮಾಲಗತ್ತಿ(ಪ್ರ.ಸಂ); 2005; ಪು.1127–28) ಎಂಬ ಉತ್ತರ ದೊರೆಯುತ್ತದೆ.

ಇದು ಬಹುತೇಕ ನಿಜವಾದರೂ ಇಷ್ಟು ಮಾತ್ರವಲ್ಲದೆ ಅವುಗಳು ಹೀಗೆ ವಿವಿದೆಡೆ ಪ್ರಸಾರಗೊಳ್ಳುವ ಸಂದರ್ಭದಲ್ಲಿ ಅಲ್ಲಿನ ಸ್ಥಳೀಯರು ಕಂಠಪಾಠ ಮಾಡಿಕೊಂಡದ್ದಿದೆ, ಮತ್ತೆ ಅವುಗಳ ಪ್ರಸರಣಕ್ಕೆ ಕಾರಣವಾದದ್ದಿದೆ. ಇದು ಇಪ್ಪತ್ತನೇ ಶತಮಾನದಲ್ಲಿ ಪಡೆದ ತಿರುವು ಕುತೂಹಲಕರವಾದುದು. ಈ ಸಂಬಂಧವಾದ ಮಾಹಿತಿ ಸಂಗ್ರಹಿಸಿದಾಗ 1968–70ರ ಸುಮಾರಿನಲ್ಲಿ ಶಿರಸಿ ಮಾರಿಕಾಂಬ ದೇವಸ್ಥಾನದ ಪರಿಸರದಲ್ಲಿ ಈ ಹಾಡುಗಳನ್ನು ಕೇಳಿಯೇ ಕಲಿತ ಬಗ್ಗೆ ಸ್ಥಳೀಯರು ವಿವರಗಳನ್ನು ನೀಡಿದರು.[3] ಆಗ ಯುವಕರಾಗಿದ್ದ ಅವರು ಹೀಗೆ ಪಡೆದುಕೊಂಡ 'ಬೇಕಾದ ಗಂಡನ ಮಾಡಿಕೊಂಡೆ' ಎಂಬ ತತ್ವಪದವನ್ನು ಧಾರವಾಡ ಆಕಾಶವಾಣಿಗೆ ಹೋಗಿದ್ದಾಗ ಹಾಡಿ ಬಂದೆ ಎಂಬ ಮಾಹಿತಿ ನೀಡಿದರು. ಅವರ ಪಾಲಿಗದು 'ಹಾಡು'; ಅದನ್ನವರು ತತ್ವಪದ ಎಂದೇನೂ ಗುರುತಿಸುವುದಿಲ್ಲ. ಇಲ್ಲೊಂದು ಅಂಶವನ್ನು ಗಮನಿಸಬೇಕು– ಅವರಿದನ್ನು ಬರೆದು ಅಥವಾ ಪುಸ್ತಕದಿಂದ ಕಲಿತದ್ದಲ್ಲ. ಕೇಳಿ ಮನನ ಮಾಡಿಕೊಂಡು ಮತ್ತೆ ಹಾಡತೊಡಗಿರುವುದು ಹಾಗೂ ಇಪ್ಪತ್ತನೇ ಶತಮಾನದ ಬಹುಮುಖ್ಯ ಬೆಳವಣಿಗೆಗಳಲ್ಲೊಂದಾದ ಆಕಾಶವಾಣಿಯಲ್ಲಿ ಅದನ್ನು ಹಾಡಿರುವುದು. ಮುಂದುವರೆದು ನೋಡುವುದಾದರೆ ಸುಮಾರು 1981–82ರ ವೇಳೆಗೆ ಅದೇ ದೇವಸ್ಥಾನದಲ್ಲಿ ಮುಂಜಾನೆ ಶಿಶುನಾಳ ಶರೀಫರ ಹಾಡುಗಳ ಗ್ರಾಮಫೋನ್ ರೆಕಾರ್ಡ್ ಹಾಕಲಾಗುತಿತ್ತು ಎಂಬ ಮಾಹಿತಿಯೂ ದೊರಕುತ್ತದೆ. ಈ ನೆಲೆಯಲ್ಲಿ ಆಕಾಶವಾಣಿಯ ಪಾತ್ರ ಗಮನಾರ್ಹವಾದುದಾಗಿದ್ದು ಈ ಶ್ರವ್ಯ ಮಾಧ್ಯಮವು ಮೌಖಿಕ ಪರಂಪರೆಯ ಹಾಡುಗಳನ್ನು ಅವು ಸಹಜವಾಗಿ ಪ್ರಚಲಿತದಲ್ಲಿ ಇಲ್ಲದೇ ಇರುವ ಪರಿಸರಗಳಿಗೂ ಪ್ರಸರಣಗೊಳ್ಳುವಂತೆ ಮಾಡಿದೆ. ಸ್ಥಳೀಯ ಅನನ್ಯತೆಗಳನ್ನು ಗುರುತಿಸುವುದು, ಪ್ರಸಾರಿಸುವುದು ತನ್ಮೂಲಕ ಒಂದು ಭಾಷಿಕ ಸಂಪತ್ತನ್ನು ಸ್ಥಳದಿಂದ ಸ್ಥಳಕ್ಕೆ, ತಲೆಮಾರಿನಿಂದ ತಲೆಮಾರಿಗೆ ವರ್ಗಾಯಿಸುವುದರಲ್ಲಿ ಆಕಾಶವಾಣಿಯ ಪಾತ್ರ ಹಿರಿದಾದುದು. ಆಧುನಿಕ ಸಮೂಹ ಮಾಧ್ಯಮಗಳಲ್ಲೊಂದಾದ ಆಕಾಶವಾಣಿ ಧಾರವಾಡದಲ್ಲಿ 1950ರಲ್ಲಿ, ಗುಲ್ಬರ್ಗಾದಲ್ಲಿ 1965ರಲ್ಲಿ ಸ್ಥಾಪನೆಯಾಯಿತು. ತದನಂತರ 1990ರ ದಶಕದಲ್ಲಿ ಹೊಸಪೇಟೆ, ರಾಯಚೂರು, ಬಿಜಾಪುರ ಇತ್ಯಾದಿ ಕೆಲ ಎಫ್.ಎಂ ಕೇಂದ್ರಗಳು ಅಸ್ತಿತ್ವಕ್ಕೆ ಬಂದವು[4] ಇವುಗಳು ಸ್ಥಳೀಯ ಕಲಾವಿದರ ಹಾಡುಗಳನ್ನು ಧ್ವನಿಮುದ್ರಿಸಿಕೊಂಡು ಪ್ರಸಾರ ಮಾಡುವತ್ತ ಗಮನ ಹರಿಸಿದವು. ಒಂದು ಕೇಂದ್ರದಲ್ಲಿ ಹೀಗೆ ಧ್ವನಿಮುದ್ರಣಗೊಂಡ ಹಾಡುಗಳು ಇತರ ಕೇಂದ್ರಗಳ ಮೂಲಕವೂ ಪ್ರಸಾರ ಹೊಂದಿದವು. ಹಲವು ಇತರ ಗೀತೆಗಳೊಂದಿಗೆ ತತ್ವಪದಗಳೂ ಹೀಗೆ ಪ್ರಸಾರ ಹೊಂದಿವೆ, ಹಲವೆಡೆಯ ಜನರನ್ನೂ ತಲುಪಿವೆ.

ಸಾವಳಗಿ ಮಹಮ್ಮದ ಸಾಬರ 'ಶಿವ ನಿನ್ನಲ್ಲಿ ಹಾನ ನೀ ನೋಡಿಲ್ಲ; ಎಲ್ಲಿ ಹುಡುಕಿದರಿಲ್ಲ. ಸಿವ ಎಲ್ಲೆಲ್ಲೂ ಇಲ್ಲ', 'ಪ್ರತಿ ಬಿಂಬದ ಮಡಕಿಯು ನೀನೆ ಮಾಡಿದಿ; ಬ್ರಹ್ಮ ಕುಂಬಾರ ಮಾಧವನಾದಿ' ಆಕಾಶವಾಣಿಯಲ್ಲಿ ಪ್ರಸಾರಗೊಂಡಿವೆ. ಹಾಗೆಯೇ ಮಾರೆಪ್ಪದಾಸರ್ ಮತ್ತು ಸಂಗಡಿಗರು ಹಾಡಿರುವ 'ಏನ್ನೊಡ ಏನ್ನೊಡವ ಹುಬ್ಬಳ್ಳಿ ಮಠದ' ಮೊದಲಾದ ತತ್ತ್ವಪದಗಳು ಈಗಲೂ ವಿವಿಧ ಕೇಂದ್ರಗಳಿಂದ ಪ್ರಸಾರವಾಗುತ್ತಿವೆ. ಹೀಗೆ ಆಧುನಿಕ ಸಂದರ್ಭದಲ್ಲಿ ಮಾಧ್ಯಮದ ಮೂಲಕ ತತ್ವಪದಗಳ ಪ್ರಸಾರ ಅವನ್ನು ಪರಿಚಿತಗೊಳಿಸಿವೆ.

ಆದರೆ ಕರ್ತೃತ್ವ ವಾದವಿವಾದಗಳಿದ್ದಲ್ಲಿ ಆಕಾಶವಾಣಿಯಲ್ಲಿ ಅವುಗಳ ಪ್ರಸಾರಕ್ಕೆ ಅಡ್ಡಿಯಾಗುತ್ತದೆ. ಈ ಕಾರಣದಿಂದಾಗಿ 'ಕ್ವಾಡಗನ ಕೋಳಿ ನುಂಗಿತ್ತಾ' ತತ್ವಪದದ ಕರ್ತೃ ಶಿಶುನಾಳ ಶರೀಫರೋ ಅಥವಾ ಕಡಕೋಳ ಮಡಿವಾಳಪ್ಪನವರೋ ಎಂಬ ವಿವಾದದ ಹಿನ್ನೆಲೆಯಲ್ಲಿ ಪ್ರಸ್ತುತ ಅದು ಆಕಾಶವಾಣಿಯಿಂದ ಪ್ರಸಾರಹೊಂದುತ್ತಿಲ್ಲ ಎಂಬುದನ್ನು ಇಲ್ಲಿ ಪೂರಕವಾಗಿ ಗಮನಿಸಬಹುದು. ಹೀಗೆ ಆಕಾಶವಾಣಿ ಹಲವು ಸ್ಥಳೀಯ ಗಾಯಕರಿಂದ ತತ್ವಪದಗಳನ್ನು ಹಾಡಿಸಿ, ಅವುಗಳನ್ನು ಸಂರಕ್ಷಿಸಿ ಪ್ರಸಾರ ಮಾಡಿದ್ದು ಕೂಡಾ ಒಂದು ಮುಖ್ಯ ಬೆಳವಣಿಗೆ.

ತತ್ವಪದಗಳನ್ನು ಪರಂಪರೆಯಿಂದ ಹಾಡುವವರು ಒಂದೆಡೆಗೆ, ಅದನ್ನು ಕೇಳಿಯೇ, ಹಾಡಿಯೇ ತಮ್ಮದನ್ನಾಗಿ ಮಾಡಿಕೊಂಡ ಆಸಕ್ತರು ಇನ್ನೊಂದೆಡೆಗೆ, ಅದರ ಜೊತೆಗೆ ಅಕ್ಷರ ಬಲ್ಲವರು ಅದನ್ನು ಬರೆದಿರಿಸಿದ ಉದಾಹರಣೆಗಳೂ ನಮಗಿಂದು ದೊರೆಯುತ್ತವೆ. ಇದು ಮುಂದೆ ಅಧ್ಯಯನಕಾರರ ನೆರವಿಗೆ ಬಂದುದು 'ಮುತ್ತಿನಹಾರ' ಮಾಲಿಕೆಯ ಹಲವು ಸಂಕಲನಗಳನ್ನು ಗಮನಿಸಿದಾಗ ಅರಿವಾಗುತ್ತದೆ.

ಇಲ್ಲೊಂದು ಆಸಕ್ತಿದಾಯಕ ಅಂಶವನ್ನು ಉಲ್ಲೇಖಿಸಬಹುದು. ಸಾವಳಗಿ ಮಹಮ್ಮದ ಸಾಬ (1917–1987) ಬಗೆಗೆ ಬರೆಯುತ್ತಾ ಹರಿಶ್ಚಂದ್ರ ದಿಗ್ಸಂಗೀಕರ್‌ರವರು ಸಾವಳಗಿ ಅಕ್ಕಮಹಾದೇವಿ ಭಜನಾ ಮಂಡಳಿ, ಬಬಲಾದದ ಮಲ್ಲಿಕಾರ್ಜುನ ಭಜನಾಮಂಡಳಿಗಳು ಇವರ ಪದಗಳನ್ನು ಹಾಡುತ್ತಾರೆ, ಅಂತೆಯೇ ಇವರು ಗೀಗೀ ಲಾವಣಿ ಹಾಡುಗಳು, ಹರಿದೇಶಿ ಹಾಡುಗಳು, ಭಜನೆ, ಮೊಹರಂ, ಹಂತಿ ಹಾಡುಗಳನ್ನು ರಚಿಸಿದ್ದಾರೆ ಎನ್ನುತ್ತಾ ಇವರು ಮೋಡಿಲಿಪಿ (ದೇವನಾಗರಿ ಲಿಪಿ)ಯಲ್ಲಿ ಬರೆಯುತ್ತಿದ್ದರು, ಯಾವ ಹಾಡು ಬೇಕೋ ಅದನ್ನು ರಚಿಸಿ ಕೊಡುತ್ತಿದ್ದರು (ಪು.11) ಎಂದು ಉಲ್ಲೇಖಿಸುತ್ತಾರೆ.

ಅದಾಗಲೇ ಇಪ್ಪತ್ತನೇ ಶತಮಾನದಲ್ಲಿ 'ರಚಿಸುವ', 'ಲಿಖಿತ ರೂಪದಲ್ಲಿ ಬರೆಯುವ', 'ಬರೆದುಕೊಡುವ' ಪ್ರಕ್ರಿಯೆಯೂ ತತ್ವಪದಕಾರರಲ್ಲಿ ಕಾಣಿಸಿಕೊಂಡಿದೆ ಎನ್ನುವುದು ಇಲ್ಲಿ ಸ್ಪಷ್ಟವಾಗುತ್ತದೆ. ಕರ್ತೃ ಹಾಡಿದ್ದನ್ನು ಬರೆದುಕೊಳ್ಳುವುದು, ಕರ್ತೃವೇ ಇತರರಿಗಾಗಿ ಬರೆದುಕೊಡುವುದು, ಮೋಡಿಲಿಪಿಯಲ್ಲಿ/ ಅಕ್ಷರರೂಪದಲ್ಲಿ ಬರೆದು ಇಡುವುದು ಒಂದು ಬಹುಮುಖ್ಯ ಬೆಳವಣಿಗೆಯಾಗಿದೆ.

ತತ್ವಪದಗಳು ಧ್ವನಿಮುದ್ರಿತ ರೂಪದಲ್ಲಿ ಅಂದರೆ ಗ್ರಾಮಫೋನ್ ತಟ್ಟೆಯ ರೂಪದಲ್ಲಿ ಜನರಿಗೆ ಲಭ್ಯವಾಗತೊಡಗಿದ್ದು 1981ರಲ್ಲಿ.[5] ಇದಕ್ಕಿಂತ ಮೊದಲು ಬಿಡಿ ಪದಗಳು ಭಜನೆ, ಭಕ್ತಿಗೀತೆಗಳೆಂಬ ರೂಪದಲ್ಲಿ ಬಂದಿರುವ ಸಾಧ್ಯತೆಯಿದೆ. ತತ್ವಪದಗಳ ಮೊದಲ ಧ್ವನಿಮುದ್ರಿತ ರೂಪವನ್ನು ಸಂಗೀತ ಸಂಸ್ಥೆ ಹೊರತಂದ ಸಿ.ಅಶ್ವಥ್ ರಾಗಸಂಯೋಜನೆಯ 'ಶರೀಫರ ಹಾಡುಗಳು' ಗ್ರಾಮಫೋನ್ ತಟ್ಟೆಯಲ್ಲಿ ಕಾಣಬಹುದು. ಇದರಲ್ಲಿ ಹತ್ತು ಹಾಡುಗಳಿದ್ದು ಸಿ.ಅಶ್ವಥ್, ಶಿವಮೊಗ್ಗ ಸುಬ್ಬಣ್ಣ ಹಾಗೂ ಸುಲೋಚನ ಹಾಡಿದ್ದಾರೆ. ಹಾಗೆಯೇ ಮತ್ತೆ 1986ರಲ್ಲಿ ಸಂಗೀತಾ ಸಂಸ್ಥೆಯವರೇ ಹೊರತಂದ ಗಾನತಟ್ಟೆ 'ತೇರನೆಳೆಯುತಾರೆ ತಂಗಿ',[6] ಇದೂ ಶರೀಫರ ಹಾಡುಗಳನ್ನು ಒಳಗೊಂಡಿದೆ, ಸಿ.ಅಶ್ವಥ್ ರಾಗಸಂಯೋಜನೆ, ಸಿ.ಅಶ್ವಥ್, ಶಿವಮೊಗ್ಗ ಸುಬ್ಬಣ್ಣ ಹಾಗೂ ಸುಲೋಚನ ಹಾಡಿರುವ ಹತ್ತು ಹಾಡುಗಳಿವೆ.

ಮೊದಲ ಗ್ರಾಮಫೋನ್ ತಟ್ಟೆಯು ತತ್ವಪದಕಾರನ ಹೆಸರಿನೊಂದಿಗೂ ಎರಡನೆಯದು ನಿರ್ದಿಷ್ಟ ಪದದ ಶೀರ್ಷಿಕೆಯೊಂದಿಗೂ ಬಂದಿತು, ತಟ್ಟೆಯ ಹೊರಕವಚದ ಮೇಲೆ ಮುದ್ರಿತ ವಿವರಗಳಿವೆ. ಅದರೊಂದಿಗೆ ಇಲ್ಲಿಯೂ ತತ್ವಪದಗಳಿಗೆ

ಒಂದು ಶೀರ್ಷಿಕೆಯನ್ನು ನೀಡಲಾಯಿತು. ಅವು ಬಹುತೇಕ ಒಟ್ಟು ಭಾವ ಸೂಚಿಸುವಂತಹಾ, ಹಾಡಿನ ಒಂದು ಸಾಲುಗಳಾಗಿದ್ದವು. ಸಹಜವಾಗಿಯೇ ಈ ತಟ್ಟೆಗಳು ವಿವಿದೆಡೆಗಳಲ್ಲಿ ಪ್ರಚಾರ ಹೊಂದಿದವು. ಇಲ್ಲಿ ಗಮನಿಸಬೇಕಾದ ಅಂಶವೆಂದರೆ ಹೀಗೆ ಈ ರೂಪ ಪಡೆಯುವುದಕ್ಕೂ ಮೊದಲು ಶಿವಮೊಗ್ಗ ಸುಬ್ಬಣ್ಣ, ಸಿ.ಅಶ್ವಥ್ ಮೊದಲಾದ ಹಾಡುಗಾರರು ಅನೇಕ ವೇದಿಕೆಗಳಲ್ಲಿ, ಕಾರ್ಯಕ್ರಮಗಳಲ್ಲಿ ಭಿನ್ನವಾದ ಸ್ವರಸಂಯೋಜನೆಯೊಂದಿಗೆ ಹಾಡಿದ್ದರು ಎನ್ನುವುದು, ಒಂದು ಹಂತದವರೆಗೆ ಈ ವಿಶಿಷ್ಟ ರಚನೆಗಳು ಹೀಗೂ ಸಮುದಾಯಗಳನ್ನು ತಲುಪಿತು.

ಆಮೇಲೆ ತೊಂಬತ್ತರ ದಶಕದಲ್ಲಿ ಇವೇ ತತ್ವಪದಗಳು ಕ್ಯಾಸೆಟ್ ರೂಪದಲ್ಲಿ ಬಂದವು, ಬಳಿಕ ಲಹರಿ ಸಂಸ್ಥೆಯು ಸಿ.ಅಶ್ವಥ್ ರಾಗಸಂಯೋಜನೆಯ 'ಸ್ವರಮಾಧುರಿ'[7] ಹೆಸರಿನ ಸರಣಿ ಸಿ.ಡಿಗಳನ್ನು ಹೊರತಂದಾಗ ಅದರಲ್ಲಿ ಒಂದು ಶಿಶುನಾಳ ಶರೀಫರ ಪದಗಳನ್ನು ಒಳಗೊಂಡಿದೆ.

ಇವೆಲ್ಲವೂ ಸಂತ ಶಿಶುನಾಳ ಶರೀಫರ ಹಾಡುಗಳಾಗಿವೆ. ಉಳಿದ ತತ್ವಪದಗಳು ಈ ತಟ್ಟೆ, ಕ್ಯಾಸೆಟ್, ಸಿ.ಡಿ ಸ್ವರೂಪದಲ್ಲಿ ಬಂದಿವೆಯೇ ಎಂಬುದು ಅಧ್ಯಯನಕ್ಕೆ ಒಳಗಾಗಬೇಕಾದ ಅಂಶವಾಗಿದೆ. ಬಹುಶ: ಬಂದಿಲ್ಲ, ಒಂದೊಮ್ಮೆ ಬಂದಿದ್ದರೂ ಅವು ತತ್ವಪದಗಳೆಂಬ ಹೆಸರಿನಲ್ಲಿರದೆ ಭಜನೆ, ಭಕ್ತಿಗೀತೆಗಳ ಹೆಸರಿನಲ್ಲಿ ಬಂದಿರುವ ಸಾಧ್ಯತೆಯಿದೆ. ಶರೀಫರ ತತ್ವಪದಗಳ ಜನಪ್ರಿಯತೆಯ ಬೆನ್ನಲ್ಲೇ 1989–90ರಲ್ಲಿ ಸಂತ ಶಿಶುನಾಳ ಶರೀಫ ಚಲನಚಿತ್ರವೂ ನಿರ್ಮಾಣಗೊಂಡಿತು. ಹಲವು ಪ್ರಶಸ್ತಿಗಳೂ ದೊರೆತವು. ಈ ಜನಪ್ರಿಯತೆ ಯಾಕಾಗಿ ಎಂಬ ಪ್ರಶ್ನೆಗೆ ಪ್ರಾಯಶ: ಶರೀಫರ ವೈಯಕ್ತಿಕ ಬದುಕಿನ ಅನುಭಾವಿ ವಿವರ, ಪವಾಡ, ನಿಗೂಢ, ಬೆರಗು ಮೂಡಿಸುವ ಘಟನಾವಳಿಗಳು ಕಾರಣವಾಗಿರಬಹುದು ಎಂಬ ಉತ್ತರವನ್ನು ಕಂಡುಕೊಳ್ಳಬಹುದು. ತತ್ವಪದಕಾರರು, ಕೀರ್ತನಕಾರರು, ವಚನಕಾರರಲ್ಲಿ ಈ ಬಗೆಯ ಅನೇಕ ಮಾದರಿಗಳನ್ನು ಕಾಣಬಹುದು. ವ್ಯಕ್ತಿತ್ವವೊಂದರ ಸುತ್ತ ಈ ತೆರನಾದ ವಿವರಗಳು ಬಂದಾಗ ಅದು ಆಕರ್ಷಣೀಯವಾಗುವುದೂ ಇದೆ. ಇದರೊಂದಿಗೆ ಕೋಮು ಸಾಮರಸ್ಯ ಸಂದೇಶ ಸಮಕಾಲೀನ ತುರ್ತಾಗಿರುವ ಸನ್ನಿವೇಶದಲ್ಲಿ ಈ ತೆರನಾದ ಮಾದರಿಗಳು ಬರುತ್ತವೆ. ಇಂದು ಶತಮಾನದ ಕೊನೆಯ ವೇಳೆಗೆ ದತ್ತವಾದ ಹಲವು ತತ್ವಪದಕಾರರ ಜೀವನ ವಿವರಗಳನ್ನು ನೋಡಿದರೆ ಅವು ಕೂಡಾ ಇದೇ ತೆರನಾದ ಅನೇಕ ಸಶಕ್ತ ಆರೋಗ್ಯಪೂರ್ಣ ಸಾಮಾಜಿಕ ಮಾದರಿಗಳನ್ನು ಒದಗಿಸುತ್ತಿರುವುದು ಕಾಣಬಹುದು

ಅದೇ ರೀತಿ ದೂರದರ್ಶನ ಚಂದನವಾಹಿನಿಯ ಮೂಲಕವೂ ತತ್ವಪದಗಳು ಪ್ರಸಾರವಾಗಿವೆ. ಆ ಕುರಿತಾದ ಸಮಗ್ರ ಮಾಹಿತಿಯ ದಾಖಲೀಕರಣ, ಅಧ್ಯಯನ ನಡೆಯಬೇಕಿದ್ದು ಅವು ಶ್ರವ್ಯ, ದೃಶ್ಯ ರೂಪಗಳಲ್ಲಾಗುವ ಬದಲಾವಣೆಗಳನ್ನು ಅಭ್ಯಸಿಸಲು ಸಹಕಾರಿಯಾಗುತ್ತವೆ.

ತತ್ವಪದಗಳು ಧ್ವನಿಮುದ್ರಣ ರೂಪ ಪಡೆಯುವಾಗ ಅಲ್ಲಿ ವಾದ್ಯ ಪರಿಕರಗಳು, ರಾಗಸಂಯೋಜನೆ ಬದಲಾಗಿವೆ. ತತ್ವಪದಗಳನ್ನು ಹೆಣ್ಣುಮಕ್ಕಳು ಗಂಡುಮಕ್ಕಳು ಹಾಡುತ್ತಿದ್ದುದು ತಿಳಿದಿರುವ ವಿಚಾರ. ಇಲ್ಲಿ ತೊಗಲ ಮಲಿಯ, ಅಳಬೇಡ, ಮೋಹದ ಮೊದಲಾದವುಗಳನ್ನು ಗಾಯಕಿ ಹಾಡಿದಾಗ ಪದದ ಅರ್ಥವಿಸ್ತಾರ, ಭಾವಪೂರ್ಣತೆ ಹೆಚ್ಚುತ್ತದೆಯೇ ಎಂಬುದು ಚರ್ಚೆಗೆ ಬಿಟ್ಟ ವಿಚಾರ. ಆದರೆ ಈ ಬಗೆಯ ಸಂಯೋಜನೆಯು ಹಾಡುಗಾರರನ್ನು, ತತ್ವಪದಗಳನ್ನು ಪ್ರಭಾವಿಸಿದೆಯೇ ಎಂಬುದನ್ನು ಕ್ಷೇತ್ರಕಾರ್ಯ ಅಧ್ಯಯನದ ಮೂಲಕ ಕಂಡುಕೊಳ್ಳಬೇಕಾಗಿದೆ. ಹೀಗೆ ಶತಮಾನದ ಸಾಂಸ್ಕೃತಿಕ ಬದಲಾವಣೆಗಳನ್ನು ಅಭ್ಯಸಿಸುವಾಗ ಕಾಣಿಸುವ ಮುಖ್ಯನೆಲೆಗಳನ್ನು ಇಲ್ಲಿ ಗಮನಿಸುತ್ತಾ ಈ ಭಾಷಿಕ ರಚನೆಗಳು ಅವುಗಳೊಂದಿಗೆ ಪಡೆದುಕೊಂಡ ಸ್ವರೂಪವನ್ನು ದಾಖಲಿಸಲಾಗಿದೆ.

**ಅಡಿಟಿಪ್ಪಣಿಗಳು**

1. ಮೈಸೂರು ವಿಶ್ವವಿದ್ಯಾಲಯದ ಕನ್ನಡ ವಿಷಯ ವಿಶ್ವಕೋಶ(2005)ದ ಪ್ರಕಾರ 'ಕನ್ನಡದಲ್ಲಿ ತತ್ವಪದಗಳ ಪ್ರಚಾರ ಪ್ರಾರಂಭವಾದುದು ಸುಮಾರು 15ನೆಯ ಶತಮಾನದಲ್ಲಿ. ಜೈನಧರ್ಮದ ಪ್ರಣಾಳಿಕೆಗಳು ತತ್ವದ ನೀತಿಗೆ ಬೆಂಬಲವಾಗಿವೆ. ರತ್ನಾಕರವರ್ಣಿಯ ಅಣ್ಣನ ಪದಗಳು ನಿಜಕ್ಕೂ ತತ್ವದ ಪದಗಳಾಗಿವೆ. ಮೌಖಿಕವಾಗಿದ್ದ ಇಂಥ ದಾಖಲೆಗಳನ್ನು ರತ್ನಾಕರವರ್ಣಿ ಮಾರ್ಗ ದಾಖಲೆಗಳನ್ನಾಗಿ ಮಾಡಿದ್ದಾನೆ. ಇಂಗಳಗಿಯ ಕವಿಯೊಬ್ಬ ಅನುಭವಸಾರಲೀಲಾ ಎಂಬ ತತ್ವದ ಪದಗಳನ್ನು ಶರಣರ ತತ್ವದ ಪದಗಳು ಎಂದು ಹಾಡಿ ಪ್ರಚಾರ ಮಾಡಿದ....' ಹೀಗೆ ಇಲ್ಲಿ ನಿಜಗುಣ ಶಿವಯೋಗಿಯ ಕೈವಲ್ಯಪದ್ಧತಿ, ಸರ್ಪಭೂಷಣ ಶಿವಯೋಗಿಯ ಕೈವಲ್ಯವಲ್ಲರಿ, ಚಿದಾನಂದಾವಧೂತರ ಕೈವಲ್ಯನವನೀತ, ಮುಪ್ಪಿನ ಷಡಕ್ಷರಿಯ ಸುಬೋಧಸಾರ, ಬಾಲಲೀಲಾ ಮಹಮತ ಶಿವಯೋಗಿಗಳ ತತ್ವಲೀಲೆಗಳು, ಕೂಡಲುಕೇಶ ಕವಿಯ ತತ್ವದ ಪದಗಳು–ಇವುಗಳನ್ನೆಲ್ಲಾ 'ತತ್ವದ ಪದಗಳು' ಎಂಬ ಶೀರ್ಷಿಕೆಯಲ್ಲಿ (ಅರವಿಂದ ಮಾಲಗತ್ತಿ(ಪ್ರ.ಸಂ);2005;ಪು.1127–28) ಗುರುತಿಸಲಾಗಿದೆ. ಆದರೆ ಇದು ಚರ್ಚೆಯಾಗಬೇಕಾದ ವಿಚಾರವಾಗಿದೆ. ಈ ಬಗೆಯ ಗುರುತಿಸುವಿಕೆ ಎಷ್ಟರಮಟ್ಟಿಗೆ ಸರಿ ಎಂಬುದನ್ನು ಕಂಡುಕೊಳ್ಳಬೇಕಾಗಿದೆ. ಇನ್ನು ಈ ಉಲ್ಲೇಖ ಗಮನಿಸಿದರೆ ಇಂತಹಾ ನಿರ್ದಿಷ್ಟ ರಚನೆಗಳನ್ನು 'ತತ್ವಪದ' ಎಂದು ಗ್ರಹಿಸಿರುವುದು ಕಾಣಿಸುತ್ತದೆ. ಇದು ಇತರ ರಚನೆಗಳು ಯಾಕಲ್ಲ ಎಂಬ ಪ್ರಶ್ನೆಗೆ ಉತ್ತರ ಪಡೆಯುವಲ್ಲಿ ಬರುವ ಗೊಂದಲದೊಂದಿಗೆ ಸ್ಪಷ್ಟವಾಗುತ್ತದೆ.
2. ಕರ್ನಾಟಕ ಸಾಹಿತ್ಯ ಅಕಾಡಮಿಯ ಮುತ್ತಿನ ಹಾರ ಮಾಲಿಕೆಯ ಪ್ರಕಟಣೆಗಳನ್ನು ಈ ನೆಲೆಯಲ್ಲಿ ನೋಡಬಹುದು. ಪ್ರಸ್ತುತ ಅಧ್ಯಯನಕ್ಕೆ ಇವುಗಳನ್ನು ವಿಸ್ತೃತವಾಗಿ ಗಮನಿಸಿಕೊಳ್ಳಲಾಗಿದ್ದು ಅನೇಕ ಸೂಕ್ಷ್ಮ ಅಂಶಗಳು ಇವುಗಳಲ್ಲಿ ಕಂಡುಬರುತ್ತವೆ.
3. ಆಕಾಶವಾಣಿಯ ಉದ್ಯೋಗಿ ಶ್ರೀ ಅನಿಲ್ ಕುಮಾರ್, ಆಕಾಶವಾಣಿ ಗುಲ್ಬರ್ಗ ಅವರು ಈ ಸಂಬಂಧ ನೀಡಿದ ಮಾಹಿತಿಗೆ ಕೃತಜ್ಞ, ಅವರು ನೀಡಿದ ಶಿರಸಿ ಪರಿಸರದ ಈ ಮಾಹಿತಿಯು ಜನಸಮುದಾಯದ ನಡುವೆ ಆಧುನಿಕ ಮಾಧ್ಯಮದ ಮೂಲಕ ತತ್ವಪದವು ಪ್ರಸರಣಗೊಂಡ ಬಗೆಯನ್ನು ಗ್ರಹಿಸಿಕೊಳ್ಳುವಲ್ಲಿ ಸಹಕಾರಿಯಾಯಿತು.
4. ಆಕಾಶವಾಣಿ 1924ರಲ್ಲಿ ಮೈಸೂರಿನಲ್ಲಿ ಪ್ರಾರಂಭವಾದರೂ ಈಗಿನ ಸ್ವರೂಪ ಪಡೆದುಕೊಂಡುದು 1950ರವೇಳೆಗೆ. '1941ರ ವೇಳೆಗೆ ಆಕಾಶವಾಣಿಯು ಮೈಸೂರು ಸರ್ಕಾರದ ಅಧೀನವಾಯಿತು. ಎಂ.ವಿ. ಗೋಪಾಲಸ್ವಾಮಿ ಅವರು ಅದರ ನಿರ್ದೇಶಕರಾದರು.' (ಸೂರ್ಯನಾಥ ಯು. ಕಾಮತ್(ಸಂ.); 1984; ಪು. 277). ಕಾಲಕ್ರಮೇಣ ರಾಜ್ಯದಾದ್ಯಂತ ಪ್ರಾರಂಭವಾದ ಆಕಾಶವಾಣಿ ಕೇಂದ್ರಗಳ ಪಾತ್ರ ಇಲ್ಲಿ ಬಹಳ ಮಹತ್ವದ್ದಾಗಿದೆ. ಆಕಾಶವಾಣಿಯಲ್ಲಿ ನಿಗದಿತ ವೇಳೆಗಳಲ್ಲಿ

ಉದಾಹರಣೆಗೆ ಮುಂಜಾನೆ 6.10ರಿಂದ6.35ರ ಅವಧಿಯಲ್ಲಿ ಒಂದು ಹಾಡು, 6.40ರಿಂದ6.50ರ ಅವಧಿಯಲ್ಲಿ ಒಂದು ಅಥವಾ ಎರಡು ಹಾಡು, ಮಧ್ಯಾಹ್ನ 1.20ರಿಂದ 1.30ರ ಅವಧಿಯಲ್ಲಿ ಒಂದು ಅಥವಾ ಎರಡು ಹಾಡು, ಸಾಯಂಕಾಲ ಕೃಷಿ ಸಂಬಂಧಿ ಕಾರ್ಯಕ್ರಮ, ಜನಪದ ಕಾರ್ಯಕ್ರಮಗಳಲ್ಲಿ ಸಮಯಾವಕಾಶ ಅನುಸರಿಸಿ ಹಾಡುಗಳನ್ನು ಪ್ರಸಾರ ಮಾಡಲಾಗುತ್ತದೆ. ತತ್ವಪದಗಳೂ ಬಹುತೇಕ ಈ ಅವಧಿಯಲ್ಲಿ ಪ್ರಸಾರವಾಗಿ ಜನಸಮೂಹವನ್ನು ತಲುಪಿವೆ. ಕೇಳಿ, ಕಲಿತು ಹಾಡುವ ಪ್ರಕ್ರಿಯೆಗೆ ಇದು ಸಹಕಾರಿಯಾಗಿದೆ.

5. ಹೊಸಪೇಟೆ ಆಕಾಶವಾಣಿ ಕೇಂದ್ರದ ಗ್ರಂಥಪಾಲಕರಾದ ಶ್ರೀ ಆರ್.ಎನ್.ಕುಂಬಾರ್ ಅವರು ಈ ಗಾನತಟ್ಟೆಗಳ ಬಗೆಗಿನ ಮಾಹಿತಿಯನ್ನು ಒದಗಿಸಿದ್ದು ಅದಕ್ಕಾಗಿ ಅವರಿಗೆ ಕೃತಜ್ಞತೆಗಳು ಸಲ್ಲುತ್ತವೆ. 'ಶರೀಫರ ಹಾಡುಗಳು' ಗ್ರಾಮಫೋನ್ ತಟ್ಟೆಯಲ್ಲಿರುವ ಹಾಡಿನ ಶೀರ್ಷಿಕೆ, ಹಾಡುಗಾರರ ಹೆಸರುಗಳನ್ನು ಇಲ್ಲಿ ದಾಖಲಾತಿಗಾಗಿ ನೀಡಲಾಗಿದೆ: 1.ಹಾವು ತುಳಿದೇನೇ–ಸುಲೋಚನ 2.ಮೋಹದ ಹೆಂಡತಿ–ಸಿ.ಅಶ್ವಥ್ 3.ಬಿದ್ದಿಯಬ್ಬೆ–ಶಿವಮೊಗ್ಗ ಸುಬ್ಬಣ್ಣ 4.ಎಂಥ ಮೋಜಿನ ಕುದುರಿ–ಸುಲೋಚನ 5.ಸೋರುತಿಹುದು–ಸಿ.ಅಶ್ವಥ್ 6.ಗುಡಿಯ ನೋಡಿರಣ್ಣ–ಸಿ.ಅಶ್ವಥ್ 7.ಅಳಬೇಡ ತಂಗಿ ಆಳಬೇಡ–ಶಿವಮೊಗ್ಗ ಸುಬ್ಬಣ್ಣ 8.ಎಲ್ಲರಂಥವನಲ್ಲ ನನ ಗಂಡ–ಸುಲೋಚನ 9.ಕೋಡಗನ ಕೋಳಿ ನುಂಗಿತ್ತ–ಶಿವಮೊಗ್ಗ ಸುಬ್ಬಣ್ಣ 10.ತಂಬೂರಿ–ಸಿ.ಅಶ್ವಥ್

6. 'ತೇರನೆಳೆಯುತಾರೆ ತಂಗಿ' ಗ್ರಾಮಫೋನ್ ತಟ್ಟೆಯಲ್ಲಿರುವ ಹಾಡಿನ ಶೀರ್ಷಿಕೆ, ಹಾಡುಗಾರರ ಹೆಸರುಗಳು ಹೀಗಿವೆ: 1.ಅಣ್ಣ ನೋಡೋಣು–ಸುಲೋಚನ 2.ಸುಗ್ಗಿ ಮಾಡೋಣ – ಸಿ.ಅಶ್ವಥ್ 3.ಹೋಗುತಿಹುದು ಕಾಯ–ಸುಲೋಚನ 4.ಗುಡುಗುಡಿಯ–ಶಿವಮೊಗ್ಗ ಸುಬ್ಬಣ್ಣ 5.ನೀ ಲೋಕದ ಕಾಳಜಿ–ಸಿ.ಅಶ್ವಥ್ 6.ತೋಟವ ನೋಡಿರಯ್ಯ–ಸಿ.ಅಶ್ವಥ್ 7.ಅಗ್ಗದರಿವಿ–ಸಿ.ಅಶ್ವಥ್, ಶಿವಮೊಗ್ಗ ಸುಬ್ಬಣ್ಣ 8.ಪಾರಿವಾಳದ –ಸುಲೋಚನ 9.ತೇರನೆಳೆಯುತಾರೆ–ಸಿ.ಅಶ್ವಥ್ 10.ನಾನಾ ಎಂಬುದು– ಸಿ.ಅಶ್ವಥ್

7. 'ಸ್ವರಮಾಧುರಿ' ಸಿಡಿಯಲ್ಲಿರುವ ಹಾಡುಗಳ ಶೀರ್ಷಿಕೆಗಳು ಹಾಗೂ ಹಾಡುಗಾರರ ವಿವರ ಹೀಗಿದೆ: 1. ತೂಗುತಿದೆ ನಿಜ ಬಯಲಲಿ–ರತ್ನಮಾಲಾ ಪ್ರಕಾಶ್, 2. ತೊಗಲ ಮಲಿಯ–ರತ್ನಮಾಲಾ ಪ್ರಕಾಶ್ 3. ಕುರುಬರೋನಾವ್–ಸಿ.ಅಶ್ವಥ್ 4. ಹೌದೆ ನಮ್ಮವ್ವ– ರತ್ನಮಾಲಾ ಪ್ರಕಾಶ್,ಮಾಲತಿ ಶರ್ಮ 5. ಹಾಕಿದ ಜನಿವಾರವ–ಶಿವಮೊಗ್ಗ ಸುಬ್ಬಣ್ಣ 6. ಎಷ್ಟು ಕಾಡತಾವು–ಕಸ್ತೂರಿ ಶಂಕರ್ 7. ಏನ್ ಕೊಡ– ಕಸ್ತೂರಿ ಶಂಕರ್ 8. ಎಂಥ ಬೇಗನೆ ಪ್ರಾಯ–ಸಿ.ಅಶ್ವಥ್ 9. ಎದ್ದು ಹೋಗುತೀನಿ–ಸಿ.ಅಶ್ವಥ್ 10. ದುಡ್ಡು ಕೆಟ್ಟದು ನೋಡಣ್ಣ–ಸಿ.ಅಶ್ವಥ್ 11. ಬಾಯಿಲೆ ಬ್ರಹ್ಮವ–ಸಿ.ಅಶ್ವಥ್. ಧ್ವನಿಮುದ್ರಣ ರೂಪದಲ್ಲಿ ವಿವಿಧ ಬಗೆಯ ಹಾಡುಗಳು ಒಳಗೊಳ್ಳುವುದು ಕುತೂಹಲಕರವಾದ ಬೆಳವಣಿಗೆಯಾಗಿದ್ದು ಶತಮಾನದ ಸ್ಥಿತ್ಯಂತರಗಳ ಪರಿಣಾಮವು ಈ ರೀತಿಯಾಗಿ ಕಾಣಿಸಿಕೊಂಡಿದೆ.

**ಆಕರ ಸೂಚಿ**


1. ಅಮರೇಶ ನುಗಡೋಣಿ; 1999; ನುಡಿವ ಬೆಡಗು; ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ
2. ಅಮರೇಶ ನುಗಡೋಣಿ; 2014; ತತ್ವಪದ ಸಾಹಿತ್ಯ ಅಧ್ಯಯನ; ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ
3. ಅರವಿಂದ ಮಾಲಗತ್ತಿ(ಪ್ರ.ಸಂ);2005; ಕನ್ನಡ ವಿಷಯ ವಿಶ್ವಕೋಶ ಕರ್ನಾಟಕ (ಪರಿಷ್ಕೃತ); ಕುವೆಂಪು ಕನ್ನಡ ಅಧ್ಯಯನ ಸಂಸ್ಥೆ, ಮೈಸೂರು ವಿಶ್ವವಿದ್ಯಾಲಯ
4. ಆನಂದಮೂರ್ತಿ ಜಿ.ವಿ.(ಸಂ); 1996; ತತ್ವಪದಕಾರರು; ಕರ್ನಾಟಕ ಸಾಹಿತ್ಯ ಅಕಾಡೆಮಿ ಬೆಂಗಳೂರು
5. ನಟರಾಜ ಬೂದಾಳು; 1998; ಶಂಕರಾನಂದ ಯೋಗಿ; ಕರ್ನಾಟಕ ಸಾಹಿತ್ಯ ಅಕಾಡೆಮಿ ಬೆಂಗಳೂರು
6. ಬಸವರಾಜ ಸಬರದ (ಸಂ); 2000; ಹೈದ್ರಾಬಾದ್ ಕರ್ನಾಟಕದ ತತ್ವಪದಗಳು; ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ
7. ಬಿರಾದಾರ ಎಂ.ಜಿ.(ಸಂ); 1997; ಮೋಟ್ನಹಳ್ಳಿ ಹಸನಸಾಬರ ತತ್ವಪದಗಳು; ವೀರಶೈವ ಅಧ್ಯಯನ ಸಂಸ್ಥೆ, ತೋಂಟದಾರ್ಯ ಮಠ, ಗದಗ
8. ಮಹಾದೇವಪ್ಪ ಬಿ; 1996; ಮೋಟ್ನಳ್ಳಿ ಹಸನ ಸಾಹೇಬ; ಕರ್ನಾಟಕ ಸಾಹಿತ್ಯ ಅಕಾಡೆಮಿ ಬೆಂಗಳೂರು
9. ಮೀನಾಕ್ಷಿ ಬಾಳಿ; 1998; ಖೈನೂರ ಕೃಷ್ಣಪ್ಪ; ಕರ್ನಾಟಕ ಸಾಹಿತ್ಯ ಅಕಾಡೆಮಿ ಬೆಂಗಳೂರು
10. ರಘುನಾಥ ಸ; 1996;ಕೈವಾರ ನಾರೇಯಣ; ಕರ್ನಾಟಕ ಸಾಹಿತ್ಯ ಅಕಾಡೆಮಿ ಬೆಂಗಳೂರು
11. ಲಿಂಗರಾಜು; 1996; ಕಡಕೋಳ ಮಡಿವಾಳಪ್ಪ; ಕರ್ನಾಟಕ ಸಾಹಿತ್ಯ ಅಕಾಡೆಮಿ ಬೆಂಗಳೂರು
12. ಸ್ವಾಮಿ ಎಸ್.ಜಿ.; 1996; ಕೊಡಲೂರು ಬಸವಲಿಂಗಪ್ಪ; ಕರ್ನಾಟಕ ಸಾಹಿತ್ಯ ಅಕಾಡೆಮಿ ಬೆಂಗಳೂರು
13. ಸೂಗಯ್ಯ ಹಿರೇಮಠ; 1996; ರಾಮಪುರ ಬಕ್ಕಪ್ಪ; ಕರ್ನಾಟಕ ಸಾಹಿತ್ಯ ಅಕಾಡೆಮಿ ಬೆಂಗಳೂರು
14. ಸೂರ್ಯನಾಥ ಯು. ಕಾಮತ್(ಸಂ.); 1984; ಕರ್ನಾಟಕ ಗೆಜೆಟಿಯರ್ ಭಾಗ 1; ಗೆಜೆಟಿಯರ್ ಇಲಾಖೆ, ಬೆಂಗಳೂರು
15. ಹರಿಶ್ಚಂದ್ರ ದಿಗ್ಸಂಗೀಕರ್; 1998; ಸಾವಳಗಿ ಮಹಮ್ಮದ ಸಾಬ; ಕರ್ನಾಟಕ ಸಾಹಿತ್ಯ ಅಕಾಡೆಮಿ ಬೆಂಗಳೂರು